ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:06-02-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ :ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./13/2020-21 ದಿನಾಂಕ: 04-02-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1 | ಶ್ರೀ.ವಿಶ್ವನಾಥ್ | ಮುಖ್ಯ ಅಭಿಯಂತರರು (ಘ.ತ್ಯಾ.ನಿ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2 | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3 | ಶ್ರೀ. ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ |
| 4 | ಶ್ರೀ.ಗಂಗಹನುಮಯ್ಯ | ವಾರ್ಡ ಸಮಿತಿ ಸದಸ್ಯರು |
| 5 | ಶ್ರೀಮತಿ. ಗೀತಾ ಕೇನಾಲ್ | ವಾರ್ಡ ಸಮಿತಿ ಸದಸ್ಯರು |
| 6 | ಶ್ರೀ. ಹೊನ್ನಪ್ಪ | ವಾರ್ಡ ಸಮಿತಿ ಸದಸ್ಯರು |
| 7 | ಶ್ರೀ.ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ:67 |
| 8 | ಶ್ರೀ. ನಾಗರಾಜು | ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ |
| 9 | ಶ್ರೀ.ಗೋಪಾಲಕೃಷ್ಣ | ಸಂಚಾರಿ ಪೋಲಿಸ್ ಕಾನ್ಸಟೇಬಲ್, ರಾಜಾಜಿನಗರ ಪೋಲಿಸ್ ಠಾಣೆ |
| 10 | ಶ್ರೀಮತಿ. ಜಿ ಶೃತಿ. | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್- 67 |
| 11 | ಶ್ರೀ. ಮಲ್ಲಯ್ಯ | ಅರಣ್ಯ ಇಲಾಕೆ ಗುತ್ತಿಗೆದಾರರ ಸಿಭಂದಿ |
| 12 | ಶ್ರೀ. ಸತೀಶ್ | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು |
| 13 | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ ,ಮಹಾಲಕ್ಷ್ಮೀಲೇಔಟ್ |
| 14 | ಶ್ರೀ. ಗಿರೀಶ್ | ಸಹಾಯಕ ಅಭಿಯಂತರರು, ಬೆಸ್ಕಂ ಮಹಾಲಕ್ಷ್ಮೀಲೇಔಟ್ |
| 15 | ಶ್ರೀ. ಮಂಜುನಾಥ್ | ಪೋಲಿಸ್ ಹೆಡ್ ಕಾನ್ಸಟೇಬಲ್, ಸುಬ್ರಹ್ಮಣ್ಯನಗರ ಪೋಲಿಸ್ ಠಾಣೆ |
| 16 | ಶ್ರೀ. ಮಂಜು | ಪೋಲಿಸ್ ಇಲಾಖೆ, ರಾಜಾಜಿನಗರ ಪೋಲಿಸ್ ಠಾಣೆ |



Scanned by CamScanner

| | | |
|---|---|---|
| 17 | ಶ್ರೀ.ಗಂಗಚೆಲುವಯ್ಯ | ಜಂ.ಜಲ ಮಂಡಳಿ |
| 18 | ಶ್ರೀ. ಸೋಮಶೇಖರಯ್ಯ | ಪೋಲಿಸ್ ಇನ್ಸಪೆಕ್ಟರ್, ಮಹಾಲಕ್ಷ್ಮೀಪುರಂ ಪೋಲಿಸ್ ಠಾಣೆ |
| 19 | ಶ್ರೀ.ಗೌತಮ್ | ವಾರ್ಡ ಮಾರ್ಷಲ್ |
| 20 | ಶ್ರೀ. ಮಾರಣ್ಣ | |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಜನವರಿ ಮಾಹೆಯ ಮೊದಲನೇ ಶನಿವಾರ ದಿ:06/02/2021ರಂದು ಬೆಳಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಸಭೆಗೆ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:</u>**

| | |
|---|---|
| ಶ್ರೀಮತಿ. ಮಂಜುಳಾ **ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ಕೇತಮಾರನಹಳ್ಳಿ 19ನೇ ಮೈನ್ 'ಕೆ' ಬ್ಲಾಕ್‌ನಲ್ಲಿ ಬಹಳ ನೀರಿನ ಸಮಸ್ಯೆ ಉಂಟಾಗುತ್ತಿರುತ್ತದೆ ಇದರಿಂದ ವಾರ್ಡನ 'ಕೆ' ಬ್ಲಾಕ್ ನಿವಾಸಿಗಳಿಗೆ ತೊಂದರೆ ಉಂಟಾಗುತ್ತಿರುತ್ತದೆ |
| ಶ್ರೀಮತಿ.ಗೀತಾ ಕೆನಾಲ್ **ವಾರ್ಡ್ ಸಮಿತಿ ಸದಸ್ಯರು** | ವಾರ್ಡನ ರಾಜಾಜಿನಗರ 'ಕೆ' ಬ್ಲಾಕ್‌ನಲ್ಲಿ ನೀರಿನ ಸಮಸ್ಯೆ ಉಂಟಾಗುತ್ತಿರುತ್ತದೆ ನೀರು ಬಹಳಾ ನಿಧಾನವಾಗಿ ಬರುತ್ತಿರುತ್ತದೆ ಇದರಿಂದ ನಿವಾಸಿಗಳಿಗೆ ತೊಂದರೆ ಉಂಟಾಗುತ್ತಿರುತ್ತದೆ |
| ಶ್ರೀ.ಗಂಗಚೆಲುವಯ್ಯ ಬೆ.ನೀರು ಸರಬರಾಜು ಮಂಡಳಿ ಅಧಿಕಾರಿಗಳು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ನೀರಿನ ಸಮಸ್ಯೆಯ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡನಲ್ಲಿ ಈಗ ಒಟ್ಟು 30 ಕೊಳವೆಬಾವಿಗಳು ಇದ್ದು ಅವುಗಳ ಕಾರ್ಯ ಸ್ಥಿತಿಯ ಮಾಹಿತಿಯನ್ನು ಕಲೆಹಾಕಲು ಸೂಚಿಸಿದರು ಹಾಗು ಬೇಸಿಗೆಕಾಲ ಶುರುವಾಗುತ್ತಿರುವುದರಿಂದ ಕಾರ್ಯನಿರ್ವಹಿಸದ ಬೋರ್‌ವೆಲ್‌ಗಳ ಪಟ್ಟಿ ಪಡೆದು ಅವುಗಳನ್ನು ರಿಚಾರ್ಜ ಮಾಡುವ ಕ್ರಮ ವಹಿಸಲು ಸಂಭಂದಪಟ್ಟ ಅಧಿಕಾರಿಗಳಿಗೆ ತಿಳಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡನಲ್ಲಿ ಹಲವು ಕಡೆ ಮ್ಯಾನ್‌ಹೋಲ್‌ನಿಂದ ಡೆಬ್ರಿಸ್ ತೆಗೆದು ಅದನ್ನು ತೆರವುಗೋಳಿಸದೆ ಅಲ್ಲಿಯೆ ಬಿಟ್ಟಿರುವುದು ವಾರ್ಡ್ ಪರಿವೀಕ್ಷಣೆ ವೇಳೆಯಲ್ಲಿ ಕಂಡುಬಂದಿರುತ್ತದೆ. ಇದರ ಬಗ್ಗೆ ಗಮನವಹಿಸಿ ತದ ಕುಡಲೆ ಡೆಬ್ರಿಸ್ ತೆರವುಗೊಳಿಸಲು ಸಂಭಂದಪಟ್ಟ ಅಧಿಕಾರಿಗಳಿಗೆ ಸೂಚಿಸಿದರು |
| ಶ್ರೀ.ಗಂಗಹನುಮಯ್ಯ **ವಾರ್ಡ್ ಸಮಿತಿ ಸದಸ್ಯರು** | ವಾರ್ಡನ 14ನೇ ಕ್ರಾಸ್‌ನಲ್ಲಿ ಕೊಳವೆಬಾವಿಗಳು ಇದ್ದು ಅದನ್ನು ಮುಟ್ಟಿದಾಗ ಶಾಕ್ ಹೊಡೆಯುತ್ತಿದ್ದು ಸಾರ್ವಜನಿಕರಿಗೆ ಬಹಳ ತೊಂದರೆ ಉಂಟಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |

Scanned by CamScanner

| | |
|---|---|
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಬೋರ್‌ವೆಲ್ ಸಮಸ್ಯೆಯ ಬಗ್ಗೆ ದೂರುಗಳು ಇದ್ದು ಬೋರ್‌ವೆಲ್ ವಿಭಾಗದ ಅಧಿಕಾರಿಗಳಿಗೆ ಕ್ರಮವಹಿಸಲು ಸೂಚಿಸಿದರು |
| ಶ್ರೀ. ಉದಯ ಶಂಕರ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನಲ್ಲಿ ಮಹಾಲಕ್ಷ್ಮೀಲೇಔಟ್ ಸಿಗ್ನಲ್ ಹತ್ತಿರ zebra crossing ಗೆ ಲೇನ್ ಮಾರ್ಕಿಂಗ್ ಮಾಡಬೇಕು ಹಾಗು ಸಿಗ್ನಲ್ ಹತ್ತಿರ ಬಲ ತಿರುವು ಮಾಡುವ ಮಾರ್ಗವನ್ನು ತೆರೆಯಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡನ ಮಹಾಲಕ್ಷ್ಮೀಲೇಔಟ್ ಸಿಗ್ನಲ್ ಹತ್ತಿರ ಮಾಡೆಲ್ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದು ಅದನ್ನು ಟ್ರಾಫಿಕ್ ಇಂಜಿನಿಯರ್ ಸೆಲ್‌ಗೆ ತಿಳಿಸಲು ಸೂಚಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ಭೋವಿಪಾಳ್ಯ ಸುತ್ತಮುತ್ತ ರಾತ್ರಿ ವೇಳೆ ಅನಗತ್ಯ ಚಟುವಟಿಕೆಗಳು ನೆಡೆಯುತ್ತಿದ್ದು ಇದರ ಬಗ್ಗೆ ಪೋಲಿಸ್ ಇಲಾಖೆಯವರು ಕ್ರಮವಹಿಸಲು ಸೂಚಿಸಿದರು |
| ಸೋಮಶೇಖರಯ್ಯ ಪೋಲೀಸ್ ಇನ್ಸಪೆಕ್ಟರ್ | ವಾರ್ಡನ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಭೋವಿಪಾಳ್ಯ ಸುತ್ತಮುತ್ತ ನೆಡೆಯುತ್ತಿರುವ ಅನಗತ್ಯ ಚಟುವಟಿಕೆಗಳ ವಿರುದ್ಧ ಪೊಲೀಸ್ ಇಲಾಖೆಯವರ ವತಿಯಿಂದ ಕ್ರಮ ತೆಗೆದುಕೊಳುವುದಾಗಿ ಸಭೆಯಲ್ಲಿ ತಿಳಿಸಿದರು |
| ಶ್ರೀಮತಿ.ಗೀತಾ ಕೆನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡನ 19ನೇ ಮೈನ್‌ಲ್ಲಿ ರಸ್ತೆಯಲ್ಲಿ ಗುಂಡಿಯಾಗಿರುವುದರ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಕಾಮಗಾರಿ ಇಲಾಖೆಯ ಸಹಾಯಕ ಅಭಿಯಂತರರು ಮಾತನಾಡಿ ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು. |
| ಶ್ರೀ.ಗಂಗಹನುಮಯ್ಯ ವಾರ್ಡ್ ಸಮಿತಿ ಸದಸ್ಯರು | ಬಿ.ಜಿ.ಎಸ್ ಶಾಲೆ ಮುಂಭಾಗದಲ್ಲಿ ಶಾಲೆ ಸುತ್ತಮುತ್ತಲು ಗಿಡಗಳನ್ನು ನೆಡುವ ಯೋಜನೆ ಹಾಕಿದ್ದು ಅದರ ಜಾಗದಲ್ಲಿ ಎಲ್ಕಟ್ರಿಕ್ ವೈರ್ ಅಡ್ಡವಾಗಿದ್ದು ಅದ್ದನ್ನು ರಸ್ತೆಯ ಇನ್ನೊಂದು ಕಡೆಗೆ ಸ್ಥಳಾಂತರಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ಮಾರ್ಷಲ್‌ಗಳು ಮತ್ತು ಆರೋಗ್ಯ ಇಲಾಖೆಯವರು ನಿಷೇದಿತ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಬಳಕೆ ಮಾಡುವವರ ವಿರುದ್ಧ ಕ್ರಮತೆಗೆದುಕೊಳಲು ಸೂಚಿಸಿದರು ಹಾಗು ಬಳಕೆ ಮಾಡುವವರಿಗೆ ದಂಡ ವಿಧಿಸಲು ಸೂಚಿಸಿದರು |
| ಶ್ರೀ. ರಾಮಚಂದ್ರ ವಾರ್ಡ್ ಸಮಿತಿ ಸದಸ್ಯರು | ವಾರ್ಡ್ 6ನೇ ಅಡ್ಡರಸ್ತೆಯಲ್ಲಿರುವ ಟ್ರಯಾಂಗಲ್ ಪಾರ್ಕ ಗೋಡೆಯು ಶಿತಲಗೊಂಡಿದ್ದು ಅದನ್ನು Restore ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು |
| ಶ್ರೀ. ರಾಮಚಂದ್ರ ವಾರ್ಡ್ ಸಮಿತಿ ಸದಸ್ಯರು | ವಾರ್ಡನ 5ನೇ ಅಡ್ಡರಸ್ತೆಯಲ್ಲಿರುವ ಮಕ್ಕಳ ಉದ್ಯಾನದಲ್ಲಿ ಮತ್ತು 8ನೇ ಅಡ್ಡರಸ್ತೆಯಲ್ಲಿ ಬೀದಿ ದೀಪದ ಸಮಸ್ಯೆ ಉಂಟಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |



Scanned by CamScanner

| | |
|---|---|
| ಶ್ರೀಮತಿ.ಗೀತಾ ಕೆನಾಲ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಉದಯಕುಮಾರ್ ಪಾರ್ಕ್‌ನ ಹತ್ತಿರ ಬೀದಿ ದೀಪ ಉರಿಯುತ್ತಿಲ್ಲವೆಂದು ಸಭೆಯಲ್ಲಿ ಪ್ರಸ್ತಾಪಿಸಿದರು |
| ಶ್ರೀ. ಸತೀಶ್<br>ಬೀದಿದೀಪ ನಿರ್ವಹಣೆ<br>ಗುತ್ತಿಗೆದಾರರು | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಬೀದಿದೀಪ ನಿರ್ವಹಣೆ ಗುತ್ತಿಗೆದಾರರು ಶ್ರೀ. ಸತೀಶ್ ರವರು ಸಭೆಗೆ ಹಾಜರಿದ್ದು ಸಮಸ್ಯೆಯನ್ನು ಸರಿಪಡಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು |
| ಶ್ರೀ. ರಾಮಚಂದ್ರ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 1ನೇ ಎನ್ ಬ್ಲಾಕ್ ನಲ್ಲಿ ಮರಗಳ ಬುಡ್ಡೆಗಳನ್ನು ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು |
| ಶ್ರೀ.ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಕಸದ ಗುತ್ತಿಗೆದಾರರಿಗೆ ಇಲಾಖೆ ವತಿಯಿಂದ ಕಸದ ಬಿಲ್ ಪಾವತಿಮಾಡಿರುವುದಿಲ್ಲ ಇದರಿಂದ ಕಸದ ಗುತ್ತಿಗೆದಾರರಿಗೆ ಬಹಳ ಸಮಸ್ಯೆ ಉಂಟಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು |

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್- 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

08/02/2021
ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್- 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner